

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜಸೇವಾ ಸಂಘ (ರಿ) ಸುಳ್ಯ, ದ.ಕ
website :www.sthanikasamjasullia.webs.com

# ಓಂ ಸ್ಥಾನಿಕ ಸಂಪದ



Reg. No : KARKAN 2008/2604!



ಸಂಪುಟ : 7
ಸಂಚಿಕೆ : 09

OFFICE OF POSTING SULLIA MDG POST OFFICE
PTR/117/2015-17 DATE OF POSTING 16TH EVERY MONTH

ಸೆಪ್ಟೆಂಬರ್: 2016
ಪುಟಗಳು : 6


## ಶ್ರೀ ಶ್ರೀ ಜಗದ್ಗುರುಗಳವರ ಅನುಗ್ರಹ ಭಾಷಣ

### ಒಂದು ಸತ್ತ್ವಯುತವಾದ ಅರ್ಪಣೆ

ಹಿಂದಿನ ಸಂಚಿಕೆಯಿಂದ

ಅಪ್ಪಯ್ಯ ದೀಕ್ಷಿತರನ್ನು ಒಮ್ಮೆ ಯಾರೋ ಕೇಳಿದರು – 'ಬ್ರಹ್ಮನ ಬಗ್ಗೆ ತಿಳಿದಿದೆಯೇ, ವಿಷ್ಣುವಿನ ಬಗ್ಗೆ ತಿಳಿದಿದೆಯೇ?' ಎಂದು. ಆಗ ಅವರು ಹೇಳಿದರು – ' ನನಗೆ ಬೇರೇನೂ ಬೇರ್‍ಯಾರು ಗೊತ್ತಿಲ್ಲ ಈಶ್ವರನ ಹೊರತು'. ಇದು ಈಶ್ವರನ ಬಗ್ಗೆ ಹೊಂದಬೇಕಾದ ಶ್ರದ್ಧೆಯನ್ನು ತೋರಿಸುತ್ತದೆ. ಆದರೆ ತಾರತಮ್ಯವನ್ನಲ್ಲ. ಈ ರೀತಿಯ ಭಕ್ತಿಯನ್ನು ಅನಾದಿ ಕಾಲದಿಂದಲೂ ಹೇಳಿದ್ದಾರೆ.

ಭಕ್ತಿಯೆಂಬುದು ಸಾಮಾನ್ಯರಿಗೆ ಮಾತ್ರವಲ್ಲ. ಧನಿಕರು ಭಕ್ತಿಯಿಂದ ಇರಬಾರದೆಂದೂ ಅಲ್ಲ.ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಶ್ರೀಮಂತನಾದ ತಕ್ಷಣ ಭಗವಂತನಿಗೆ ನಮಸ್ಕರಿಸದಿದ್ದರೆ ತಪ್ಪಾಗುತ್ತದೆ. ಒಮ್ಮೆ ನಮ್ಮ ಗುರುಗಳಿಗೆ ಗೋಪುರದ ಮಹತ್ತ್ವವೇನು ಎಂದು ಯಾರೋ ಕೇಳಿದರಂತೆ. ಆಗ ಗುರುಗಳು ಹೇಳಿದ ಉತ್ತರವಿದು ' ಮನುಷ್ಯನು ದೇವಸ್ಥಾನಕ್ಕೆ ಹೋಗುವಾಗ ತಾನು ಶ್ರೀಮಂತ, ತಾನು ಬಲಿಷ್ಠ ಎಂದು ಹಿಗ್ಗಬಹುದು. ಆ ರೀತಿಯಾದ ಭಾವನೆ ಬರಬಾರದು. ಹಿರಿದಾದ ಗೋಪುರವನ್ನು ನೋಡಿದೊಡನೆಯೇ ಭಗವಂತನ ಹಿರಿಮೆ ತಿಳಿಯುತ್ತದೆ. ಅವನ ಆಲಯವೇ ಹಿರಿದಾದ ಮೇಲೆ ಅವನ ಮಹಿಮೆ ಅಪಾರವೆನಿಸುತ್ತದೆ. ಈ ರೀತಿಯಾದ ಭಾವನೆ ನಮ್ಮ ಮನಸ್ಸಿನಲ್ಲಿ ಬರಬೇಕು ಎಂಬ ಉದ್ದೇಶದಿಂದ ದೊಡ್ಡದಾದ ಗೋಪುರವನ್ನು ಕಟ್ಟಿದ್ದಾರೆ ಪೂರ್ವಿಕರು' ಎಂದು.

ಹರ ನಮಃ ಪಾರ್ವತೀಪತಯೇ ಹರ ಹರ ಮಹದೇವ॥
ಜಾನಕೀಕಾಂತಸ್ಮರಣಂ ಜಯ ಜಯ ರಾಮರಾಮ ॥

ಮುಗಿಯಿತು........

ಪತ್ರಿಕೆಯ ಪ್ರಾಯೋಜಕರು

| | |
|---|---|
| ಡಾ। ಹರಪ್ರಸಾದ್ ತುದಿಯಡ್ಕ ಮತ್ತು ಮನೆಯವರು<br>ಮೊ.9341126260 | ವಿಷ್ಣುರಾವ್ ಮಡಿಯಾಲ ಮತ್ತು ಮನೆಯವರು<br>ಮೆನೇಜರ್, ಸುಳ್ಯ ಡಿಪಾರ್ಟ್‌ಮೆಂಟಲ್ ಸ್ಟೋರ್<br>ಶ್ರೀರಾಂಪೇಟೆ , ಸುಳ್ಯ<br>ಮೊ.9964240229 |



ಸಂಪಾದಕೀಯ

ಡಾ.ಸದಾಶಿವ ರಾವ್
sadashiva.dr@gmail.com



### ಸಾತ್ವಿಕತೆ

ಗಂಡ ಹೆಂಡಿರಲ್ಲಿ ಭಯಂಕರ ವಾಗ್ವಾದ ನಡೆಯುತ್ತಿತ್ತು.ಇದು ದಿನ ನಿತ್ಯದ ಕಾಯಕವಾದರೂ ಇಂದು ಮಿತಿ ಮೀರಿತ್ತು. ಕಡೆಗೆ ಗಂಡ ನನಗೆ ಚಿಟಿ ಚಿಟಿ ಬದುಕು ಸಾಕಾಗಿ ಹೋಗಿದೆ. ನಾನು ಸಾಯುವುದೇ ಸೈ ಎಂದವನೆ ಬಾಗಿಲು ತೆರೆದು ಕೊಂಡು ಹೊರಗೆ ಹೋದ.

ಪಕ್ಕದ ಮನೆಯವರಿಗೆ ಬೇಡವೆಂದರೂ ಇವರ ಮಾತು ಕಿವಿಗೆ ಬೀಳುತ್ತಿತ್ತು. ಧಡಾರನೇ ಬಾಗಿಲು ಹಾಕಿಕೊಂಡು ಗಂಡ ಹೋದ ರಭಸ ಕೇಳಿ ಹೆದರಿ ಹೋದರವರು. ಇವನು ಹೇಳಿದಂತೆ ನಡೆಯುವವನೇ ಸೈ ಎಂದು ಕೊಂಡರು.

ಸುಮ್ಮನಿರಲಾರದೆ ಮೆಲ್ಲನೆ ಇವರ ಮನೆಗೆ ಹೋದರು. ಮನೆಯೊಡತಿ ಶಾಂತವಾಗಿ ಚಹಾ ಹೀರುತ್ತಿದ್ದಳು. ಇವರು “ ಬೇಡವೆಂದರೂ ನಿಮ್ಮ ಜಗಳ ಕಿವಿಗೆ ಬಿತ್ತು.ಯಜಮಾನರು ಏನು ಮಾಡಿಕೊಳ್ಳುವರೊ ಎಂಬ ಚಿಂತೆಯಾಗಿದೆ ಹೋಗಿ ನೋಡಲೇ” ಎಂದರು.ಅವಳು ನಸುನಗುತ್ತಾ “ ಚಿಂತೆ ಮಾಡಬೇಡಿ, ಹೋಗುವಾಗ ಛತ್ರಿ ಹಿಡಿದುಕೊಂಡು ಹೋಗಿದ್ದಾರೆ. ಬಿಸಿಲಿಗೆ ಹೆದರುವ ಮನುಷ್ಯ ಸಾವಿಗೂ ಹೆದರುವವನೇ? ಜೀವದಾಸೆಯಿಂದಲೇ ಛತ್ರಿ ಹಿಡಿದಿರೋದು” ಎಂದಳು. ಹೌದಲ್ಲ! ಈ ಜಗತ್ತು ಒಂದು ನಿಯಮ ಬದ್ಧವಾಗಿದೆ. ಪ್ರತಿದಿನ ಬದಲಾವಣೆಯಾಗುತ್ತದೆ. ಅದರಂತೆ ನಾವೂ ಬದಲಾಗಬೇಕು. ನಮ್ಮಲ್ಲಿ ವಿಧೇಯತೆ ಇರಬೇಕು.ಹಿರಿಯರ ಮಾತನ್ನು ಕಿರಿಯರು ಅನುಸರಿಸಬೇಕು. ಗಂಡ ಹೆಂಡರಲ್ಲಿ ಅನ್ಯೋನ್ಯತೆ ಇರಬೇಕು. ಸಾತ್ವಿಕತೆ ವೃದ್ಧಿಯಾಗಲು ಮನೆಯಲ್ಲಿ ನಿತ್ಯಭಜನೆ, ಸಂಧ್ಯಾವಂದನೆ, ದೇವರ ಪೂಜೆ, ಹೊಸ್ತಿಲ ಪೂಜೆ, ಕಾಲಕಾಲಕ್ಕೆ ಸತ್ಯನಾರಾಯಣ ಪೂಜೆ, ಶ್ರಾದ್ಧಕರ್ಮಗಳು ನಡೆಯುತ್ತಿರಬೇಕು.

## ಈ ತಿಂಗಳ ಶುಭದಿನಗಳು

### ದುರ್ಮುಖಿ ಸಂವತ್ಸರದ ದಕ್ಷಿಣಾಯನ ವರ್ಷಋತು ಭಾದ್ರಪದ ಅಶ್ವಿನಿ

### 16–09–2016 ರಿಂದ 15–10–2016 ರವರೆಗೆ

| | | | |
|---|---|---|---|
| 16–09–2016 | – ಕನ್ಯಾ ಸಂಕ್ರಮಣ, ಪೌರ್ಣಮಿ | 02–10–2016 | – ಗಾಂಧಿ ಜಯಂತಿ |
| 17–09–2016 | – ಮಹಾಲಯಾರಂಭ | 02–10–2016 | – ಆಯುಧ ಪೂಜೆ |
| 30–09–2016 | – ಮಹಾಲಯ ಅಮವಾಸ್ಯೆ | 10–10–2016 | – ಮಹಾನವಮಿ |
| | – ಸರ್ವಪಿತೃ ಶ್ರಾದ್ಧ | 11–10–2016 | – ವಿಜಯದಶಮಿ |
| 01–10–2016 | – ನವರಾತ್ರಿ ಆರಂಭ | 16–10–2016 | – ಪೌರ್ಣಮಿ |

## ಗುರುದರ್ಶನ ಯಾತ್ರೆ –2016

ಆದಿ ಶಂಕರಾಚಾರ್ಯರು ಭರತಖಂಡದಲ್ಲಿ ಸಂಸ್ಥಾಪಿಸಿದ, ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ, ಅದ್ವೈತ ಗುರುವರೇಣ್ಯರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಮತ್ತು ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳ ಚಾತುರ್ಮಾಸ್ಯ ಕಾಲದ ಗುರುದರ್ಶನ ಕಾರ್ಯಕ್ರಮವು ದಿನಾಂಕ 27–08–2016 ನೇ ಶನಿವಾರದಂದು, ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಮಾಜದ ಸಮಸ್ತ ಸಂಘ, ಸಂಸ್ಥೆಗಳ ಸದಸ್ಯರುಗಳ ಹಾಗೂ ಬಂಧುಗಳ ಭಾಗವಹಿಸುವಿಕೆಯೊಂದಿಗೆ ಸುಸಂಪನ್ನಗೊಂಡಿತು. 1200 ವರ್ಷಗಳಿಂದಲೂ ಪುರಾತನವಾದ ಸರ್ವವಂದವಾದ ಗುರುಪೀಠದ 36 ನೇ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅನುಗ್ರಹ ಮಂತ್ರಾಕ್ಷತೆಯನ್ನು ಪಡೆಯುವ ಭಾಗ್ಯವು, ಏಕಾದಶಿ ನಿಮಿತ್ತ, ಪೂರ್ವನಿರ್ಧರಿತ ದಿನದ ಮುಂಚಿನ ದಿನವೇ ನಮಗೆಲ್ಲರಿಗೂ ಒದಗಿಬಂತು.

ಶನಿವಾರದಂದು ಬ್ರಾಹ್ಮೀಕಾಲ 4.30 ಕ್ಕೆ ಸುಳ್ಯದ ಜ್ಯೋತಿ ಆಸ್ಪತ್ರೆಯ ಆವರಣದಿಂದ, ನಮ್ಮ ಪ್ರಯಾಣವು ಶೃಂಗೇರಿಯ ಕಡೆಗೆ ಹೊರಟಿತು. ಸುಳ್ಯ, ಬೆಳ್ಳಾರೆ, ಸುಬ್ರಹ್ಮಣ್ಯ, ಕಾವು ಪರಿಸರದಿಂದ ಸುಮಾರು 46 ಮಂದಿ ಸಮಾಜಬಾಂಧವರು ಒಂದು ಬಸ್ಸು ಮತ್ತು ಎರಡು ಕಾರುಗಳಲ್ಲಿ ಪ್ರಯಾಣ ಬೆಳೆಸಿದರು. ಬೆಳಗ್ಗೆ 7.00 ಗಂಟೆಗೆ ಕೊಕ್ರಾಡಿ ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಾಲಯಕ್ಕೆ ಎಲ್ಲರೂ ತಲುಪಿ, ಶ್ರೀ ದೇವರ ದರ್ಶನವನ್ನು ಪಡೆದರು. ಪುಷ್ಕಳವಾದ ಉಪಾಹಾರವನ್ನು ಸೇವಿಸಿದರು. ಈ ವ್ಯವಸ್ಥೆಯನ್ನು ಒದಗಿಸಿದ ದೇವಾಲಯದ ವ್ಯವಸ್ಥಾಪಕರಿಗೆ ನಮ್ಮ ಧನ್ಯವಾದಗಳು.

ಮುಂದೆ ನಮ್ಮ ಪ್ರಯಾಣ ಶೃಂಗೇರಿಗೆ ಮುಂದುವರಿದು 10 ಗಂಟೆಗೆ ಶ್ರೀ ಕ್ಷೇತ್ರಕ್ಕೆ ತಲುಪಿದೆವು. ಶ್ರೀ ಶಾರದಾಂಬೆಯ ದಿವ್ಯ ಚರಣಗಳಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸಿ, ಶಕ್ತಿಗಣಪತಿ, ತೋರಣ ಗಣಪತಿ, ಆದಿಶಂಕರಾಚಾರ್ಯರಿಗೆ ನಮಿಸಿ, ಪಾವನವಾದ ತುಂಗಾತೀರ್ಥವನ್ನು ಸೇವಿಸಿ, ವಿದ್ಯಾಶಂಕರ ದೇಗುಲವನ್ನು ಸಂದರ್ಶಿಸಿ, ಬಳಿಕ ನಾವೆಲ್ಲ ಶ್ರೀಗುರುಗಳ ದರ್ಶನಕ್ಕೆ ನರಸಿಂಹವನದ ಕಡೆಗೆ ಹೆಜ್ಜೆ ಹಾಕಿದೆವು. ತುಂಗೆಯ ಹರಿವಿನ ಸಿರಿಯನ್ನು ಕಣ್ತುಂಬಿಸಿಕೊಂಡು, ಪೂಗವನದೊಳಗಿನ ನಮ್ಮ ಗಮನವು ಗುರುನಿವಾಸಕ್ಕೆ ತಲುಪಿತು. ಗುರುಮಂದಿರವು ಎಂದಿನಂತೆ ಭಕ್ತಾದಿಗಳ ಸಂದಣಿಯಿಂದ, ಉಭಯ ಗುರುಗಳ ದಿವ್ಯ ಸಾನಿಧ್ಯದಲ್ಲಿ ಶ್ರೀ ಚಂದ್ರಮೌಳೀಶ್ವರ ದೇವರ ಸ್ವರ್ಣ ಅಲಂಕಾರದೊಂದಿಗೆ ವಿರಾಜಮಾನವಾಗಿತ್ತು.

ಸುಳ್ಯದ ಸಮಾಜಬಾಂಧವರು ತಮ್ಮ ಯಥಾನುಶಕ್ತಿ ಹಸಿರುವಾಣಿ ಕಾಣಿಕೆಯನ್ನು ಗುರುಮಂದಿರದಲ್ಲಿ ಶ್ರೀ ಗುರುಗಳ ಸನ್ನಿಧಿಯಲ್ಲಿ ಅರ್ಪಣೆ ಮಾಡಿದರು. ಸಂಘ ಮತ್ತು ವೈಯುಕ್ತಿಕ ನೆಲೆಯಲ್ಲಿ ಪಾದಪೂಜಾ , ಗುರುಭಿಕ್ಷಾಕಾರ್ಯಗಳನ್ನು ನೆರವೇರಿಸಲಾಯಿತು. ಶ್ರದ್ಧಾ ಭಕ್ತಿಯಿಂದ ಹಿರಿಯ ಜಗದ್ಗುರುಗಳ ಆಶೀರ್ವಚನವನ್ನು ಶ್ರವಣ ಮಾಡಿದ ನಂತರ ಫಲಮಂತ್ರಾಕ್ಷತೆಯನ್ನು ಶ್ರೀ ಗುರುಗಳಿಂದ ಎಲ್ಲರೂ ಪಡೆದು ಕೃತಾರ್ಥರಾದರು.ಕಿರಿಯ ಸ್ವಾಮಿಗಳು ಎಲ್ಲ ಮಾತೆಯರಿಗೆ ಸೀರೆಯನ್ನು ವಿತರಿಸಿದರು. ಶ್ರೀ ಶಾರದಾ ಪ್ರಸಾದವನ್ನು ಪಡೆದ ಅವರೆಲ್ಲರೂ ಧನ್ಯರು.

ಗುರುಮಂದಿರದಿಂದ ಮತ್ತೆ ಎಲ್ಲರೂ ಹೊರಟು ಭೋಜನಶಾಲೆಗೆ ತಲುಪಿ ಅಲ್ಲಿ ಭೋಜನ ಪ್ರಸಾದವನ್ನು ಸ್ವೀಕರಿಸಿದರು. ಹಲವು ಊರುಗಳಿಂದ ಆಗಮಿಸಿದ ನಮ್ಮ ಸಮಾಜದ ಬಂಧುಗಳು ಪರಸ್ಪರ ಪರಿಚಯಿಸಿಕೊಂಡು ಸಂತಸದ ಕ್ಷಣಗಳನ್ನು ಹಂಚಿಕೊಂಡರು.

ಪುನಃ ಸುಳ್ಯದ ಕಡೆಗೆ ಪ್ರಯಾಣವು 3.00 ಗಂಟೆಗೆ ಹೊರಟಿತು. ಬರುತ್ತಾ ಬಸ್ಸಿನಲ್ಲಿದ್ದವರು ತಮ್ಮ ಅನುಭವವನ್ನು ಹಂಚಿಕೊಂಡರು. ಗುರುಕೃಪೆಯ ಮಹತ್ವವನ್ನು ವರ್ಣಿಸಿದರು. ಭಕ್ತಿಗೀತೆ, ಭಜನೆಗಳನ್ನು ಮಾಡುತ್ತಾ, ನಮ್ಮ ಪ್ರಯಾಣವು ನಾರಾವಿ ಬಳಿಯಿರುವ ನಾವರ– ಶ್ರೀ ಮಹಾಲಿಂಗೇಶ್ವರ ದೇವಾಲಯದ ಬಳಿ ತಲುಪಿತು. ಸಂಜೆಯ ಉಪಾಹಾರವು ಅಲ್ಲಿ ನಡೆಯಿತು. ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ ಅಲ್ಲಿನ ಅರ್ಚಕರಿಗೆ ನಮ್ಮ ಧನ್ಯವಾದಗಳು. ಎಲ್ಲರೂ ಸಂತೃಪ್ತಿಯಿಂದ ಮತ್ತೆ ಸುಳ್ಯದ ಕಡೆಗೆ ಬಸ್ಸಿನಲ್ಲಿ ಪ್ರಯಾಣ ಬೆಳೆಸಿದರು. ರಾತ್ರಿ 9.00 ಗಂಟೆಗೆ ಸುಳ್ಯದ ಜ್ಯೋತಿ ಆಸ್ಪತ್ರೆಯ ಆವರಣಕ್ಕೆ ತಲುಪಿದರು.ಪ್ರಯಾಣಿಕರನ್ನು ಅವರವರ ಮನೆಗಳಿಗೆ ಬೀಳ್ಕೊಡಲಾಯಿತು. ಈ ಮೂಲಕ 2016 ರ



ಗುರುದರ್ಶನ ಯಾತ್ರೆಯು ಸುಸಂಪನ್ನವಾಯಿತು.

ಬೆಳ್ಳಾರೆಯಿಂದ ಅಮ್ಚಿನಡ್ಕಕ್ಕೆ ಸಮಾಜಬಂಧುಗಳನ್ನು ಕರಕೊಂಡು ಬರುವರೆ ವಾಹನವನ್ನು ಒದಗಿಸಿದ ಡಾ। ಸದಾಶಿವ ರಾಯರಿಗೆ ಕೃತಜ್ಞತೆಗಳು. ಹಸಿರುವಾಣಿಯನ್ನು ಒದಗಿಸಿದ ಗುರುಭಕ್ತರಿಗೆ ಕೃತಜ್ಞತೆಗಳು. ಸಮಸ್ತ ಯಾತ್ರಿಕರಿಗೆ ನಮ್ಮ ಸಂಘದ ಕೃತಜ್ಞತೆಗಳು.

ವರದಿ: ಕೃಷ್ಣರಾವ್ ನಾವೂರು

---

## ಹಸಿರುವಾಣಿ ಕಾಣಿಕೆ

**1) ಬಯಂಬು ಭಾಸ್ಕರರಾವ್ :– 25 ಕೆ.ಜಿ ಅಕ್ಕಿ**

**2) ವಸಂತ ಮತ್ತು ಮನೆಯವರು :– 25 ಕೆ.ಜಿ ಅಕ್ಕಿ ( ಹೋಟೆಲ್ ದ್ವಾರಕಾ)**

**3) ರಾಜರಾಮ ಜೋಷಿ ನಾವೂರು : – 25 ಕಿ.ಜಿ ಅಕ್ಕಿ**

**4) ಕೆರೆಕರೆ ಭಾಸ್ಕರ ರಾವ್, ಕೇರ್ಪಳ :– 25 ಕೆ.ಜಿ ಅಕ್ಕಿ**

**5) ಡಾ। ಸದಾಶಿವ ರಾವ್ :– ತೆಂಗಿನ ಕಾಯಿ ಮತ್ತು ಬಾಳೆಗೊನೆ**

---

## ಗುರುದರ್ಶನ ಲೆಕ್ಕಪತ್ರ

| | | | |
|---|---|---|---|
| ಆದಾಯ:– | ಯಾತ್ರಾರ್ಥಿಗಳಿಂದ : | ರೂ: | 19,750/– |
| | ಸಹಾಯಧನ : | ರೂ: | 340/– |
| | | | 20,090 |
| ಖರ್ಚು : | ಬಸ್ಸಿನ ಬಾಡಿಗೆ : | ರೂ: | 14,000/– |
| | ಉಪಾಹಾರ(ಕೊಕ್ರಾಡಿ) | ರೂ: | 2110/– |
| | ಉಪಾಹಾರ(ನಾವರ) | ರೂ: | 2000/– |
| | ಪಾದಪೂಜೆ ಸೇವೆ | ರೂ: | 1600/– |
| | ಇತರ ಖರ್ಚು | ರೂ: | 380/– |
| | | | 20,090/– |

---

## ನಿಧನ

**ಅಜ್ಜಾವರ – ಹಂಚಿನ ಮನೆತನದ ಸಖಾರಾಮರಾಯರು ಅಲ್ಪಕಾಲದ ಅಸೌಖ್ಯದಿಂದ 10–09–2016 ನೇ ಶನಿವಾರ ರಾತ್ರಿ ನಿಧನರಾದರು.ಇವರ ಪತ್ನಿ ವೇದಾವತಿ ಯವರು ಎರಡು ವರ್ಷಗಳ ಹಿಂದೆ ಸಂಸಾರವನ್ನು ಅಗಲಿರುತ್ತಾರೆ. ಕೃಷಿಕರಾಗಿ, ಸಮಾಜಕ್ಕೆ ಪರಿಚಿತರಾಗಿದ್ದರು. ಇವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಪ್ರಾರ್ಥಿಸುತ್ತೇವೆ.**

## ಸೆಪ್ಟೆಂಬರ್–4 – ವೈದ್ಯಕೀಯ ಶಿಬಿರ

**ಒಮೇಗಾ ಆಸ್ಪತ್ರೆ , ಮಂಗಳೂರು, ಸುಳ್ಯ ಜ್ಯೋತಿ ಆಸ್ಪತ್ರೆ, ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜ ಸೇವಾ ಸಂಘ (ರಿ) ಸುಳ್ಯ , ಮತ್ತು ರೋಟರಿ ಕ್ಲಬ್ ಸುಳ್ಯ– ಈ ಸಂಸ್ಥೆಗಳ ಸಹಯೋಗದೊಂದಿಗೆ ಸೆಪ್ಟೆಂಬರ್ – 4 ರವಿವಾರದಂದು, ಜ್ಯೋತಿ ಆಸ್ಪತ್ರೆಯಲ್ಲಿ ಉಚಿತ ವೈದ್ಯಕೀಯ ಶಿಬಿರವು ಆಯೋಜಿಸಲ್ಪಟ್ಟಿತ್ತು.**

**ಪೂರ್ವಾಹ್ನ 10.00 ಕ್ಕೆ ಉದ್ಘಾಟನಾ ಸಮಾರಂಭ ನಡೆಯಿತು. ಕುಮಾರಿ ಶ್ವೇತಾ ಐ.ಕೆ ಪ್ರಾರ್ಥನೆ ಮಾಡಿದರು. ಪಿ. ಭಾಸ್ಕರರಾವ್‌ರವರು ಉದ್ಘಾಟಿಸಿದರು. ರೋಟರಿ ಅಧ್ಯಕ್ಷರಾದ ಟಿ. ಗಿರಿಜಾಶಂಕರರು ಶುಭ ಹಾರೈಸಿದರು. ಖ್ಯಾತ ಹೃದಯರೋಗ ತಜ್ಞರಾದ ಡಾ। ಪ್ರಸನ್ನರವರು ಶಿಬಿರದ ಮಾಹಿತಿಯನ್ನು ನೀಡಿದರು. ಕೃಷ್ಣರಾವ್ ನಾವೂರು ಧನ್ಯವಾದ ಅರ್ಪಿಸಿದರು.10.30 ರಿಂದ ರೋಗಿಗಳ ಉಚಿತ ತಪಾಸಣಾ ಕಾರ್ಯವು ನಡೆಯಿತು. ಮಧುಮೇಹ ಪರೀಕ್ಷೆ, ರಕ್ತದ ಒತ್ತಡ, ಇಸಿಜಿ– ಪರೀಕ್ಷೆ, ಹೃದಯ– ಸ್ಕ್ಯಾನಿಂಗ್ ಪರೀಕ್ಷೆ, ಇತ್ಯಾದಿ ಸೇವೆಗಳನ್ನು ಉಚಿತವಾಗಿ ನಡೆಸಲಾಯಿತು.ಸುಮಾರು 75 ಮಂದಿ ಸಾರ್ವಜನಿಕರು ಮತ್ತು ನಮ್ಮ ಸಮಾಜ ಬಾಂಧವರು ಭಾಗವಹಿಸಿದರು. ಅಪರಾಹ್ನ 3.00 ಕ್ಕೆ ಶಿಬಿರವು ಮುಕ್ತಾಯಗೊಂಡಿತು. ಬೆಳಗ್ಗಿನ ಉಪಹಾರ, ಮಧ್ಯಾಹ್ನದ ಭೋಜನ ಮತ್ತು ಆಸ್ಪತ್ರೆಯ ಸರ್ವ ಸವಲತ್ತುಗೊಂದಿಗೆ ಕಾರ್ಯಕ್ರಮವನ್ನು ಡಾ। ಸದಾಶಿವರಾವ್ ಸಂಘಟಿಸಿದರು. ಸಂಘವು ಡಾ। ಸದಾಶಿವರಾವ್‌ರವರಿಗೆ ಮತ್ತು ಭಾಗವಹಿಸಿದ ಸಮಾಜಬಾಂಧವರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ.**

ವರದಿ: ಕೃಷ್ಣರಾವ್ ನಾವೂರು

## ಸೆಪ್ಟೆಂಬರ್ ತಿಂಗಳ ಮಾಸಿಕ ಸಭೆ

**ತಾ.01–09–16 ನೇ ಗುರುವಾರ ಸಂಜೆ 6.30**ಕ್ಕೆ ಸುಳ್ಯ ಜ್ಯೋತಿ ಆಸ್ಪತ್ರೆಯ ಸಂಘದ ಕಛೇರಿಯಲ್ಲಿ ಮಾಸಿಕ ಸಭೆಯು ಪಿ. ಭಾಸ್ಕರರಾವ್ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಟಿ. ಗಿರಿಜಾಶಂಕರರು ಪ್ರಾರ್ಥಿಸಿದರು. ಪಿ. ಭಾಸ್ಕರರಾವ್ ಸ್ವಾಗತಿಸಿದರು. ಶೃಂಗೇರಿ ಗುರುದರ್ಶನ ಯಾತ್ರೆಯ ಲೆಕ್ಕಪತ್ರ ಮಂಡಿಸಲಾಯಿತು. ಸೆಪ್ಟಂಬರ್ 11 ರವಿವಾರದಂದು ಶ್ರೀ ಚೆನ್ನಕೇಶವ ಸಭಾಂಗಣದಲ್ಲಿ ವಿದ್ಯಾನಿಧಿ ವಿತರಣಾ ಕಾರ್ಯಕ್ರಮ ನಡೆಸುವರೆ ತೀರ್ಮಾನಿಸಲಾಯಿತು. ಸೆಪ್ಟೆಂಬರ್ 4 ರವಿವಾರದಂದು ಜ್ಯೋತಿ ಆಸ್ಪತ್ರೆಯಲ್ಲಿ ಆಯೋಜಿಸಲ್ಪಡುವ ವೈದ್ಯಕೀಯ ಶಿಬಿರದಲ್ಲಿ ತೊಡಗಿಸಿಕೊಳ್ಳುವಂತೆ ನಿರ್ಧರಿಸಲಾಯಿತು. ಕಾರ್ಯದರ್ಶಿ ಕೃಷ್ಣರಾವ್ ನಾವೂರು ಧನ್ಯವಾದ ಅರ್ಪಿಸುವುದರೊಂದಿಗೆ ಸಭೆಯನ್ನು ಸಮಾಪನಗೊಳಿಸಲಾಯಿತು.

ವರದಿ : ಕೃಷ್ಣರಾವ್ ನಾವೂರು

## ಚಿಂತನೆ

ಯತ್ರಾನಂದಾಶ್ವ ಮೋದಾಶ್ವ ಮುದಃ ಪ್ರಮುದ ಆಸತೇ ।
ಕಾಮಸ್ಯ ಯತ್ರಾಪಾಃ ಕಾಮಸ್ತತ್ರ ಮಾಮಮೃತಂ
ಕೃಧೀಂದ್ರಾಯೇಂದೋ ಪರಿಸ್ರವ ॥

–ಋ –9.11.11

ಹೇ ಪ್ರಭುವೇ ! ಎಲ್ಲಿ ಹರ್ಷ, ಪ್ರಸನ್ನತೆ ಮತ್ತು ಶಾಂತಿಯು ವಿರಾಜಮಾನವಾಗಿದೆಯೋ ಎಲ್ಲಿ ಕಾಮ–ಸುಖದ ಅಭೀಷ್ಟ ಧಾರೆಗಳು ಪ್ರಾಪ್ತವೋ ಆ ಲೋಕದಲ್ಲಿ ನನ್ನನ್ನುಅಮರನನ್ನಾಗಿ ಮಾಡು, ಹೇ ಸುಖಸ್ರೋತ ಪರಮಾತ್ಮನೇ! ಕೃಪೆ ಮಾಡಿ ಆನಂದ ಧನದ ಮಳೆ ಸುರಿಸು

## ಧಾರ್ಮಿಕ ಪ್ರಶ್ನೋತ್ತರ

### 1.ಆದರ್ಶ ಹಿಂದೂವಿನ ದಿನಚರಿ ಹೇಗಿರಬೇಕು?

ಸೂರ್ಯೋದಯಕ್ಕೆ ಮುಂಚೆಯೇ ಏಳುವುದು,ಎದ್ದಕೂಡಲೇ ಕುಲದೇವತೆಗೆ, ಇಷ್ಟದೇವತೆಗೆ ನಮಸ್ಕರಿಸುವುದು, ಶೌಚಸ್ನಾನಾದಿಗಳ ನಂತರ ಉಪಾಹಾರಕ್ಕೆ ಮುನ್ನವೇ ಧ್ಯಾನ, ಪ್ರಾರ್ಥನೆ, ಪಾರಾಯಣಗಳನ್ನು ಮಾಡುವುದು, ಆಹಾರ ಸ್ವೀಕಾರದ ಸಮಯದಲ್ಲಿ ಅದನ್ನು ಮನೆದೇವರಿಗೆ ನೈವೇದ್ಯ ಮಾಡಿ ಪ್ರಸಾದವೆಂದು ಭಾವಿಸಿ ಸ್ವೀಕರಿಸುವುದು, ವ್ಯವಹಾರ ಕರ್ಮಗಳು ಅರ್ಥಾರ್ಜನೆಗೆ ಅವಶ್ಯವಾದ ಕರ್ಮಗಳು ಮೊದಲಾದುವನ್ನು ಧರ್ಮಕ್ಕೆ ಲೋಪಬರದಂತೆ ಮಾಡಿ ಮುಗಿಸಿದ ಮೇಲೆ ಸಂಜೆ ಕುಟುಂಬದವರೆಲ್ಲರೂ ಒಟ್ಟು ಸೇರಿ ಸ್ವಲ್ಪ ಕಾಲ ಧ್ಯಾನ ಪ್ರಾರ್ಥನೆ ಪಾರಾಯಣಗಳನ್ನು ಮಾಡುವುದು, ಮಲಗುವ ಮುನ್ನ ಮತ್ತೆ ಕುಲದೇವತೆ, ಇಷ್ಟದೇವತೆಗಳಿಗೆ ನಮಸ್ಕಾರ– ಇದು ಆದರ್ಶ ಹಿಂದೂವಿನ ದಿನಚರಿಯ ರೂಪರೇಖೆ. ಇದಲ್ಲದೆ ಆಗಾಗ್ಗೆ ದೇವಸ್ಥಾನಗಳಿಗೆ ಹೋಗಿ ದೇವರ ದರ್ಶನ ಮಾಡುವುದು, ವರ್ಷದಲ್ಲಿ ಕೆಲವು ವ್ರತ ಉತ್ಸವಗಳನ್ನಾದರೂ ಅರ್ಥಪೂರ್ಣವಾಗಿ ಆಚರಿಸುವುದು, ಒಮ್ಮೆಯಾದರೂ ವಿಶೇಷ ತೀರ್ಥಯಾತ್ರಾಸ್ಥಳಗಳನ್ನು ವಿಧಿಪೂರ್ವಕವಾಗಿ ಸಂದರ್ಶಿಸುವುದು, ಬಡಬಗ್ಗರಿಗೆ ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳಿಗೆ ದಾನ, ಎಲ್ಲಕ್ಕಿಂತಲೂ ಹೆಚ್ಚಾಗಿ ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ನೈತಿಕ ಪರಿಶುದ್ಧಿ. ಇವನ್ನೂ ಕೂಡ ಆದರ್ಶ ಹಿಂದೂವಾಗಲು ಬಯಸುವವನು ಮರೆಯಬಾರದು.

### 2. ಇತರ ಧರ್ಮಗಳ ಬಗ್ಗೆ ಹಿಂದೂವಿನ ದೃಷ್ಟಿಕೋನ ಹೇಗಿರಬೇಕು?

ಎಲ್ಲ ಮತಧರ್ಮಗಳೂ ವೃತ್ತದ ಪರಿಧಿಯ ಮೇಲಿನ ಬಿಂದುಗಳಂತೆ; ವೃತ್ತದ ಕೇಂದ್ರವೇ ಪರಮಾತ್ಮ– ಸಾಕ್ಷಾತ್ಕಾರ. ಎಲ್ಲ ತ್ರಿಜ್ಯಗಳೂ ಕಡೆಗೆ ಕೇದ್ರ ಬಿಂದುವನ್ನೇ ಸೇರುವಂತೆ ಎಲ್ಲ ಮತಧರ್ಮಗಳೂ ಒಬ್ಬನೇ ಪರಮಾತ್ಮನೆಡೆಗೆ ಕರೆದೊಯ್ಯುವ ವಿವಿಧ ಉಪಾಸನಾಮಾರ್ಗಗಳು. ಇವುಗಳಲ್ಲಿ ಮೇಲು ಕೀಳೆಂಬ ಭಾವನೆಯಿಲ್ಲ. ಆದರೂ, ನಮ್ಮ ಸ್ವಧರ್ಮವು ನಮಗೆ ಉತ್ತಮ; ನಿಮ್ಮದು ನಿಮಗೆ. ಎಲ್ಲರೂ ಅವರರವರ ಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಂಡು ಆಚರಿಸಿದರೆ ಪ್ರೀತಿಯುತ ಸಹಬಾಳ್ವೆ ಸಿದ್ಧಿಸುತ್ತದೆ. ಇದು ಆದರ್ಶ ಹಿಂದೂವಿನ ನಿಲುವು.



## ವಿದ್ಯಾನಿಧಿ ವಿತರಣಾ ಸಮಾರಂಭ

ಸೆಪ್ಟೆಂಬರ್ –11 ರವಿವಾರದಂದು ಮಧ್ಯಾಹ್ನ 12.00 ಗಂಟೆಗೆ ಸುಳ್ಯ ಶ್ರೀ ಚೆನ್ನಕೇಶವ ದೇವಳದ ಸಭಾಂಗಣದಲ್ಲಿ ಸಂಘದ ವಿದ್ಯಾನಿಧಿ ವಿತರಣಾ ಕಾರ್ಯಕ್ರಮವು ನಡೆಯಿತು. ಪಿ. ಭಾಸ್ಕರರಾವ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಶೈಲೇಶ್ ಮಣಿಕ್ಕಳ ( ಮೆನೇಜರ್ ಕರ್ನಾಟಕ ಬ್ಯಾಂಕ್ ) ರವರು ಆಗಮಿಸಿ, ವಿದ್ಯಾನಿಧಿಯನ್ನು ವಿತರಿಸಿದರು. ರೂ 23,000 /– ಮೊತ್ತವನ್ನು ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ನೀಡಲಾಯಿತು.ವಿದ್ಯಾನಿಧಿಯ ರೂವಾರಿಯಾದ ವೈ. ಫಾಲಚಂದ್ರ ರಾವ್‌ರವರು ಶುಭ ಹಾರೈಸಿದರು. ಕಾರ್ಯದರ್ಶಿ ಕೃಷ್ಣರಾವ್ ನಾವೂರು ಧನ್ಯವಾದ ಅರ್ಪಿಸಿದರು. ಭೋಜನದೊಂದಿಗೆ ಕಾರ್ಯಕ್ರಮಕ್ಕೆ ವಿರಾಮ ನೀಡಲಾಯಿತು.

ವರದಿ: ಕೃಷ್ಣರಾವ್ ನಾವೂರು

## Riddle corner

**What 5 letter word typed in all capital letter can be read the same upside down?**

**Send your answer to 9740206411 and get right answer.**

## ಚಂದಾದಾರರಾಗಲು ಈಗ ಅವಕಾಶ

ಸ್ಥಾನಿಕ ಸಂಘದ ಪತ್ರಿಕೆಯ ಅಜೀವ ಚಂದಾದಾರರಾಗಲು ರೂ. 300ನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ. ಶ್ರೀ ಕೃಷ್ಣ ಕನ್ಸಲ್ಟೆನ್ಸಿ, ಮುಖ್ಯರಸ್ತೆ **Lic office** ಎದುರು, ಸುಳ್ಯ 574239.

ದೂರವಾಣಿ: 9448549732

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜಸೇವಾ ಸಂಘದ WEBSITE

ನಮ್ಮ ಸಂಘದ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ನೋಡಬಹುದು, ಅಲ್ಲದೇ "ಸ್ಥಾನಿಕ ಸಂಪದ" ಪತ್ರಿಕೆಯನ್ನು ಓದಬಹುದು.

**WEBSITE:www.sthanikasamajasullia.webs.com**



ತಾವು ಬರೆದ ಅಧ್ಯಾತ್ಮದ ಲೇಖನಗಳು, ಕಥೆಗಳು, ಕವನ, ವ್ಯಂಗ್ಯಚಿತ್ರ, ಜೀವನದ ಆಕಸ್ಮಿಕ ಘಟನೆಗಳನ್ನು ಕಳುಹಿಸಿರಿ. ಅಲ್ಲದೆ ಮಕ್ಕಳಿಗೆ ನಗೆಹನಿ, ಚಿತ್ರ, ಚುಟುಕು, ಕವನ, ಚಮತ್ಕಾರಿಕ ಪ್ರಶ್ನೆಗಳನ್ನು ಬರೆಯಲು ಪ್ರೋತ್ಸಾಹಿಸಿ. ಸ್ಥಳಾವಕಾಶವನ್ನು ಹೊಂದಿಕೊಂಡು ಪ್ರಕಟಿಸುತ್ತೇವೆ.

ವಿಳಾಸ: ಡಾ ಸದಾಶಿವ ರಾವ್
ಜ್ಯೋತಿ ಆಸ್ಪತ್ರೆ ಸುಳ್ಯ. 574239
sadashiva.dr@gmail.com


| | | |
|---|---|---|
| ಗೌರವಸಂಪಾದಕರು | : | ಶ್ರೀ ರಾಜಾರಾಮ ಜೋತಿಷ್ಯರು |
| ಸಂಪಾದಕರು | : | ಡಾ.ಸದಾಶಿವ ರಾವ್ |
| ಸದಸ್ಯರು | : | ಶ್ರೀ ಬಯಂಬು ಭಾಸ್ಕರ ರಾವ್ |
| | | ಶ್ರೀ ಐ.ಕೆ ರಾಮಚಂದ್ರ ರಾವ್ |
| | | ಶ್ರೀ ಗಿರಿಜಾಶಂಕರ ತುದಿಯಡ್ಕ |
| | | ಶ್ರೀ ಜಯರಾಮ ರಾವ್ ಸಂಪಾಜೆ |

**if not delivered please Return to the publisher**

PRINTED AND PUBLISHED BY DR.P.SADASHIVA RAO ON BEHALF OF SRI SUBRAHMANYA STHANIKA SAMAJA SEVA SANGHA (R) SULLIA,D.K

AND PRINTED AT SAGAR COMPUTERS & DIGITAL STUDIO SHREERAMPETE , SULLIA 574239

AND PUBLISHED AT SULLIA D.K 574239.